**NOVEMBER 07, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಕೇಂದ್ರದ ಬೆಂಬಲ ಬೆಲೆ ಯೋಜನೆ ಅಡಿ, ಹೆಚ್ಚುವರಿ 16 ಸಾವಿರದ 105 ಮೆಟ್ರಿಕ್ ಟನ್ ಹೆಸರು ಖರೀದಿ – ಪ್ರಲ್ಹಾದ ಜೋಶಿ.
- ‘ಇ–ಶ್ರಮ್’ ನೋಂದಾಯಿತ ಕಾರ್ಮಿಕರಿಗೆ, ಬಿ.ಪಿ.ಎಲ್ ಕಾರ್ಡ್ ನೀಡಿಕೆಗೆ, ರಾಜ್ಯಾದ್ಯಂತ ಚಾಲನೆ.
- ಮಾನಸಿಕ ಆರೋಗ್ಯ; ವಿಡಿಯೋ ಕೌನ್ಸೆಲಿಂಗ್ ಸೇವೆ, ‘ಟೆಲಿ ಮಾನಸ್’ ಜೊತೆ ಲಭ್ಯ – ದಿನೇಶ ಗುಂಡೂರಾವ್.
- ಸಾಹಿತ್ಯ ಅಕಾದೆಮಿಯ, 2022ನೇ ಸಾಲಿನ ಗೌರವ ಹಾಗೂ ಸಾಹಿತ್ಯ ಶ್ರೀ ಪ್ರಶಸ್ತಿ ಪ್ರಕಟ; 15 ಜನರಿಗೆ ಸಂದ ಪುರಸ್ಕಾರ.

<><><>

ಈಗ ವಾರ್ತೆಗಳ ವಿವರ

<><><>

ನೀರಿನ ಸಮರ್ಪಕ ನಿರ್ವಹಣೆ, ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಬಗ್ಗೆ, ಜನರಲ್ಲಿ ಅರಿವು ಮತ್ತು ಸಂವೇದನೆ ಮೂಡಿಸಲು, ನೀತಿ ಆಯೋಗ, 15 ದಿನಗಳ ‘ಜಲ ಉತ್ಸವ’ವನ್ನು ಪ್ರಾರಂಭಿಸಿದೆ. ‘ನದಿ ಉತ್ಸವ’ ಮಾದರಿಯಲ್ಲಿ ‘ಜಲ ಉತ್ಸವ’ದ ಕಲ್ಪನೆಯನ್ನು ಪ್ರಸ್ತಾಪಿಸಿದ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮಾರ್ಗದರ್ಶನದಲ್ಲಿ, ಈ ಅಭಿಯಾನ, ನಿನ್ನೆಯಿಂದ ಆರಂಭವಾಗಿ, ಈ ತಿಂಗಳ 24ರ ವರೆಗೆ, ಕರ್ನಾಟಕ ಸೇರಿದಂತೆ 20 ಮಹತ್ವಾಕಾಂಕ್ಷೆಯ ರಾಜ್ಯಗಳಲ್ಲಿ, ಆಚರಿಸಲಾಗುತ್ತಿದೆ. ಜಲ ಶಕ್ತಿ ಸಚಿವಾಲಯದ ರಾಷ್ಟ್ರೀಯ ಜಲ ಜೀವನ್ ಮಿಷನ್, ಜನೋತ್ಸವವಾಗಿ, ಜಲ ಸಾಕ್ಷರತೆ ನಿಟ್ಟಿನಲ್ಲಿ, ರಾಜ್ಯದ 7 ಮಹತ್ವಾಕಾಂಕ್ಷಿ ಜಿಲ್ಲೆಗಳು ಹಾಗೂ 14 ಆಶೋತ್ತರ ತಾಲೂಕಗಳಲ್ಲಿ, ‘ಜಲ ಉತ್ಸವ’ ಆಯೋಜಿಸಿದೆ.

<><><>

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ, 22 ಸಾವಿರದ 215 ಮೆಟ್ರಿಕ್ ಟನ್ ಹೆಸರು ಕಾಳನ್ನು ಬೆಂಬಲ ಬೆಲೆ ಅಡಿ, ಖರೀದಿಸಲಾಗಿದೆ ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ರಾಜ್ಯದ ರೈತರು ಹೆಚ್ಚಿನ ಪ್ರಮಾಣದಲ್ಲಿ ಹೆಸರು ಬೆಳೆದಿದ್ದು, ಹೆಚ್ಚುವರಿಯಾಗಿ 16 ಸಾವಿರದ 105 ಮೆಟ್ರಿಕ್ ಟನ್ ಹೆಸರು ಖರೀದಿಸಲು, ಕೇಂದ್ರ ಮುಂದಾಗಿದೆ ಎಂದು ಹೇಳಿದ್ದಾರೆ.

<><><>

ವಿಜಯನಗರ ಜಿಲ್ಲೆಯಲ್ಲಿ, ಮುಂಗಾರು ಹಂಗಾಮಿನ, ಗುಣಮಟ್ಟದ ಶೇಂಗಾ ಖರೀದಿಸಲು, ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆ ಅಡಿ, ಕ್ವಿಂಟಾಲ್‌ಗೆ 6 ಸಾವಿರದ 7 ನೂರಾ 83 ರೂಪಾಯಿ ನಿಗದಿ ಪಡಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

<><><>

ಸರ್ವೋಚ್ಚ ನ್ಯಾಯಾಲಯ, 'ಇ–ಶ್ರಮ್' ನೋಂದಾಯಿತ ಕಾರ್ಮಿಕರಿಗೆ' ಆದ್ಯತಾ ಪಡಿತರ ಚೀಟಿ – ಬಿ.ಪಿ.ಎಲ್ ಕಾರ್ಡ್ ನೀಡಲು ಆದೇಶಿಸಿದೆ. ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ, ಬಿ.ಪಿ.ಎಲ್. ಚೀಟಿ ನೀಡುವ ಕಾರ್ಯ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ ಎಂದು, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ. ಬಿ.ಪಿ.ಎಲ್. ಚೀಟಿ ಹೊಂದಿರದ, ಇ–ಶ್ರಮ್ ನೋಂದಾಯಿತ ಎಲ್ಲ ಅರ್ಹ ಕಾರ್ಮಿಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯನ್ನು ಸಂಪರ್ಕಿಸಲು ಕೋರಲಾಗಿದೆ. ಉಚಿತ ಸಹಾಯವಾಣಿ: 1800–425–9339 ಅಥವಾ ಸಹಾಯವಾಣಿ 1–9–6–7ಕ್ಕೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30ರ ವರೆಗೆ, ಸಂಪರ್ಕಿಸಬಹುದು.

<><><>

ಇಂಗ್ಲೆಂಡಿನ ಬ್ರಿಟಿಷ್ ಕೌನ್ಸಿಲ್ ಮತ್ತು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಹಯೋಗದಲ್ಲಿ, ಯೂನಿವರ್ಸಿಟಿ ಆಫ್ ಈಸ್ಟ್ ಲಂಡನ್‌ನಲ್ಲಿ ನಡೆಯುವ, ಸ್ಕೌಟ್ **(Scholar for outstanding undergraduate talent)** ಕಾರ್ಯಕ್ರಮದಲ್ಲಿ, ಗುಲಬರ್ಗಾ ವಿಶ್ವವಿದ್ಯಾಲಯದ ಐವರು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ವಿದ್ಯಾರ್ಥಿಗಳು, ನಾಡಿದ್ದು 9 ರಿಂದ, 15 ದಿನಗಳ ಲಂಡನ್ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು, ಗುಲಬರ್ಗಾ ವಿಶ್ವವಿದ್ಯಾಲಯದ ಉಪ ಕುಲಪತಿ ದಯಾನಂದ ಅಗಸರ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯದ 31 ವಿಶ್ವವಿದ್ಯಾಲಯಗಳ ಪೈಕಿ, ಗುಲಬರ್ಗಾ, ರಾಯಚೂರು, ತುಮಕೂರು ಮತ್ತು ಮೈಸೂರು ವಿಶ್ವವಿದ್ಯಾಲಯದ, ತಲಾ ಐವರು ವಿದ್ಯಾರ್ಥಿಗಳು ಅಧ್ಯಯನ ಪ್ರವಾಸ ಕೈಗೊಳ್ಳಲಿದ್ದಾರೆ. 23 ರಂದು ಲಂಡನ್‌ದಿಂದ ಹಿಂತಿರುಗಲಿದ್ದಾರೆ ಎಂದರು.

<><><>

ಬಳ್ಳಾರಿ ಜಿಲ್ಲೆ, ಸಂಡೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆ, ಮುಕ್ತ ಹಾಗೂ ನ್ಯಾಯಸಮ್ಮತ ಮತದಾನ ಖಾತ್ರಿ ಪಡಿಸಲು, ಜಿಲ್ಲಾಡಳಿತ ಸ್ವೀಪ್ ಚಟುವಟಿಕೆಗಳನ್ನು ಯಶಸ್ವಿಯಾಗಿ

ಆಯೋಜಿಸುತ್ತಿದೆ. ಮಾದರಿ ನೀತಿ ಸಂಹಿತೆ ಜಾರಿಗೊಂಡ, ಅಕ್ಟೋಬರ್ 15 ರಿಂದ ಇಲ್ಲಿಯ ವರೆಗೆ, ಸಿ–ವಿಜಿಲ್ ಆಪ್ ಮೂಲಕ 21 ಪ್ರಕರಣಗಳನ್ನು ಸಾರ್ವಜನಿಕರು ದಾಖಲಿಸಿದ್ದಾರೆ. ಈ ತಿಂಗಳ 12ರ ವರೆಗೆ ದೂರುಗಳನ್ನು ದಾಖಲಿಸಬಹುದು ಎಂದು, ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತಕುಮಾರ ಮಿಶ್ರಾ, ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ಪ್ರಶಾಂತಕುಮಾರ ಮಿಶ್ರಾ ಧ್ವನಿ 43 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಾನಸಿಕ ಆರೋಗ್ಯ ಕಾಪಾಡಲು, 'ಟೆಲಿ–ಮಾನಸ್' ಸಹಾಯವಾಣಿ ಮೂಲಕ, ವಿಡಿಯೋ ಕೌನ್ಸೆಲಿಂಗ್ ಸೇವೆ ಕೂಡ ಒದಗಿಸಲಾಗುತ್ತಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಬೆಂಗಳೂರಿನ ಟ್ರಿಪಲ್ ಐಟಿ, 'ಟೆಲಿ ಮನಸ್ ಆಪ್' ಅಭಿವೃದ್ಧಿಪಡಿಸಿದೆ. ಯೋಗ, ವ್ಯಾಯಾಮ, ಡಯಟ್ ಮಾಹಿತಿ ಜೊತೆಗೆ, ರಾಜ್ಯವಾರು ವೈದ್ಯಕೀಯ ಸಂಸ್ಥೆಗಳ ಮಾಹಿತಿ ನೀಡಲಿದೆ. ರಾಜ್ಯದ ನಿಮ್ಹಾನ್ಸ್ ಸೇರಿದಂತೆ, 23 ವೈದ್ಯಕೀಯ ಸಂಸ್ಥೆಗಳ ವಿವರಗಳಿವೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಪ್ರಕಟಿಸಿದ್ದಾರೆ. ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯಕ್ಕೂ ಆದ್ಯತೆ ನೀಡಬೇಕಾಗಿದೆ. ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರ ಸಹಾಯಕ್ಕಾಗಿ, ಸದಾ ಕಾಲ ಸಿದ್ಧ ಎಂದು, ಸಚಿವರು ಹೇಳಿದ್ದಾರೆ.

<><><>

ರಾಜ್ಯ ಸಾಹಿತ್ಯ ಅಕಾದೆಮಿ, 2022 ನೇ ಸಾಲಿನ ಗೌರವ ಪ್ರಶಸ್ತಿಗೆ, ಅಗ್ರಹಾರ ಕೃಷ್ಣಮೂರ್ತಿ, ಆರ್.ಕೆ.ಹುಡಗಿ, ರಂಜಾನ ದರ್ಗಾ, ಇಂದಿರಾ ಹೆಗಡೆ ಹಾಗೂ ತುಂಬಾಯಿ ರಾಮಯ್ಯ ಅವರನ್ನು ಆಯ್ಕೆ ಮಾಡಿದೆ. ಅಕಾದೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದರು. 'ಸಾಹಿತ್ಯ ಶ್ರೀ' ಪ್ರಶಸ್ತಿಗೆ, ಡಾಕ್ಟರ್ ಬಂಜಗೆರೆ ಜಯಪ್ರಕಾಶ, ರೂಮಿ ಹರೀಶ, ಎಚ್.ಎನ್.ಆರತಿ, ಅನಸೂಯಾ ಕಾಂಬ್ಳೆ ಸೇರಿದಂತೆ, 10 ಜನ ಸಾಹಿತಿಗಳನ್ನು ಆಯ್ಕೆ ಮಾಡಲಾಗಿದೆ. ವಿಮರ್ಶಕರ ಅಭಿಪ್ರಾಯಗಳನ್ನು ಆಧರಿಸಿ, 2021ರಲ್ಲಿ ಪ್ರಕಟವಾದ 19 ಕೃತಿಗಳಿಗೆ ಬಹುಮಾನ ಪ್ರಕಟಿಸಲಾಗಿದೆ ಎಂದರು.

<><><>

ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರಿನ ಕೇಶವಶಿಲ್ಪ ಸಭಾಂಗಣದಲ್ಲಿ, 69ನೇ ಕನ್ನಡ ರಾಜ್ಯೋತ್ಸವ ಸಂಭ್ರಮದ ಅಂಗವಾಗಿ, 37 ದಿನಗಳ ಕನ್ನಡ ಪುಸ್ತಕ ಹಬ್ಬವನ್ನು, ಆಯೋಜಿಸಿದೆ. ಇಂದು ಸಂಜೆ 6 ಗಂಟೆಗೆ, ಖ್ಯಾತ ಯಕ್ಷಗಾನ ಕಲಾವಿದ, ಮೂಲತಃ ಉತ್ತರಕನ್ನಡ ಜಿಲ್ಲೆ, ಶಿರಸಿಯ ದಿವಾಕರ ಹೆಗಡೆ ಕೆರೆಹೊಂಡ ಅವರಿಂದ, ಏಕವ್ಯಕ್ತಿ ತಾಳಮದ್ದಲೆ ಕಾರ್ಯಕ್ರಮ ಜರುಗಲಿದೆ.

'ಕನಕಜಾನಕಿ' ಪ್ರಸಂಗದ ಆಖ್ಯಾನ ಮಾಡಲಿರುವ, ಮೈಸೂರು ನಿವಾಸಿ, ದಿವಾಕರ ಹೆಗಡೆ ಅವರು, ಪ್ರದೇಶ ಸಮಾಚಾರಕ್ಕಾಗಿ, 'ಏಕವ್ಯಕ್ತಿ ತಾಳಮದ್ದಲೆ'ಯ ವಿಶೇಷತೆ ಕುರಿತು, ಮಾಹಿತಿ ನೀಡಿದ್ದಾರೆ.

<><><>

ದಿವಾಕರ ಹೆಗಡೆ ಧ್ವನಿ 45 ಸೆಕೆಂದುಗಳು

<><><>

ಇಂದಿನಿಂದ ನಾಲ್ಕು ದಿನಗಳ ಕಾಲ, ಪದವಿ ಪೂರ್ವ ಕಾಲೇಜುಗಳ, ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ, ತುಮಕೂರಿನ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿತವಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಾಕ್ಟರ್ ಬಾಲಗುರುಮೂರ್ತಿ ತುಮಕೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, ಈ ಕ್ರೀಡಾಕೂಟದಲ್ಲಿ 19 ವರ್ಷದೊಳಗಿನ 3 ಸಾವಿರ ವಿದ್ಯಾರ್ಥಿಗಳು, ರಾಜ್ಯದ ವಿವಿಧ ಜಿಲ್ಲೆಯ, ಪದವಿ ಪೂರ್ವ ಕಾಲೇಜುಗಳಿಂದ ಆಗಮಿಸಲಿದ್ದಾರೆ. ಕ್ರೀಡಾಕೂಟದ ನಿರ್ಣಾಯಕರಾಗಿ ನೂರು ಜನ ಅಥ್ಲೆಟಿಕ್ಸ್ ಪರಿಣಿತ ತಾಂತ್ರಿಕ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

<><><>

ರಾಮನಗರ ಜಿಲ್ಲೆ, ಕನಕಪುರದಲ್ಲಿ ಆಯೋಜಿತ, 14 ಮತ್ತು 17 ವರ್ಷ ವಯೋಮಿತಿಯ, ಶಾಲಾ ಬಾಲಕ, ಬಾಲಕಿಯರ, ರಾಜ್ಯ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ, ಧಾರವಾಡ ಕ್ರೀಡಾ ವಸತಿ ನಿಲಯದ, 9 ಕುಸ್ತಿ ಪಟುಗಳು ಪ್ರಥಮ ಸ್ಥಾನ ಪಡೆದು, ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇಬ್ಬರು ಕುಸ್ತಿಪಟುಗಳು, ದ್ವಿತೀಯ ಸ್ಥಾನ ಹಾಗೂ 12 ಜನ ಕುಸ್ತಿ ಪಟುಗಳು ತೃತೀಯ ಸ್ಥಾನ ಪಡೆದಿದ್ದಾರೆ. ಒಟ್ಟು 23 ಪದಕಗಳನ್ನು ಪಡೆದು, ಪ್ರೌಢ ಶಾಲಾ ವಿಭಾಗದಲ್ಲಿ, ವಿರಾಗ್ರಣಿ ಪ್ರಶಸ್ತಿ ಪಡೆದಿದ್ದಾರೆ. ಕುಸ್ತಿ ತರಬೇತುದಾರ ಶಿವಪ್ಪ ಪಾಟೀಲ ಹಾಗೂ ವಿಜೇತ ಕುಸ್ತಿಪಟುಗಳನ್ನು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹಾಗೂ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಅಭಿನಂದಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, 'ಮುಡಾ' ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಹಗರಣ ಸಂಬಂಧ, ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ, ವಿಚಾರಣೆಗೆ ಹಾಜರಾದರು.

<><><>

ಸರ್ಕಾರದ ವಿವಿಧ ಜನಪರ ಯೋಜನೆ ಮತ್ತು ಅನುದಾನಗಳಲ್ಲಿ, ಎಲ್ಲ ಇಲಾಖೆಗಳು ಕಡ್ಡಾಯವಾಗಿ, ವಿಶೇಷ ಚೇತನರಿಗಾಗಿ ಶೇಕಡ 5 ರಷ್ಟು ಮೀಸಲಿಡಬೇಕು ಎಂದು, ಆಯುಕ್ತ ದಾಸ್ ಸೂರ್ಯವಂಶಿ ಕೋಲಾರದಲ್ಲಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕೇಂದ್ರದ ಬೆಂಬಲ ಬೆಲೆ ಯೋಜನೆ ಅಡಿ, ಹೆಚ್ಚುವರಿ 16 ಸಾವಿರದ 105 ಮೆಟ್ರಿಕ್ ಟನ್ ಹೆಸರು ಖರೀದಿ – ಪ್ರಲ್ಹಾದ ಜೋಶಿ.
- ‘ಇ–ಶ್ರಮ್’ ನೋಂದಾಯಿತ ಕಾರ್ಮಿಕರಿಗೆ, ಬಿ.ಪಿ.ಎಲ್ ಕಾರ್ಡ್ ನೀಡಿಕೆಗೆ, ರಾಜ್ಯಾದ್ಯಂತ ಚಾಲನೆ.
- ಮಾನಸಿಕ ಆರೋಗ್ಯ; ವಿಡಿಯೋ ಕೌನ್ಸೆಲಿಂಗ್ ಸೇವೆ, ‘ಟೆಲಿ ಮಾನಸ್’ ಜೊತೆ ಲಭ್ಯ – ದಿನೇಶ ಗುಂಡೂರಾವ್.
- ಸಾಹಿತ್ಯ ಅಕಾದೆಮಿಯ, 2022ನೇ ಸಾಲಿನ ಗೌರವ ಹಾಗೂ ಸಾಹಿತ್ಯ ಶ್ರೀ ಪ್ರಶಸ್ತಿ ಪ್ರಕಟ; 15 ಜನರಿಗೆ ಸಂದ ಪುರಸ್ಕಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ